## ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್ಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮೊಕದ್ದಮೆ ನಂಃ 1297/2018

ಸಿ.ಡಬ್ಲ್ಯೂ-10      ಪಿ.ಡಬ್ಲ್ಯೂ-8

| | |
|---|---|
| ಸಾಕ್ಷಿಯ ಹೆಸರು | ಃ ಈರಪ್ಪ  ಮಂಟಿಹಾಳ |
| ತಂದೆಯ  ಹೆಸರು | ಃ ಶಿವಾನಂದ |
| ವಯಸ್ಸು | ಃ  57 ವರ್ಷ |
| ಉದ್ಯೋಗ | ಃ  ಎ.ಎಸ್.ಐ. |
| ವಾಸಸ್ಥಳ | ಃ  ಹುನಗುಂದ |

ದಿನಾಂಕಃ 25-11-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದಃ

2014 ರಿಂದ 2019  ರವರೆಗೆ  ನಾನು ಅಮೀನಗಡ  ಪೋಲಿಸ ಠಾಣೆಯಲ್ಲಿ ಮುಖ್ಯಪೇದೆ  ಅಂತಾ ಕರ್ತವ್ಯನಿರ್ವಹಿಸಿರುತ್ತೇನೆ.

ದಿ: 15-05-2017 ರಂದು ಚಾಸಾ-13 ರವರು  ಆರೋಪಿತರ ಪತ್ತೆ ಕುರಿತು ಮೌಖಿಕ ಆದೇಶ ಮಾಡಿರುತ್ತಾರೆ.  ಅದರಂತೆ ನಾನು  ಪ್ರಸ್ತುತ ಪ್ರಕರಣದಲ್ಲಿರುವ ಆರೋಫಿತರ ಪತ್ತೆ ಕುರಿತು ರಕ್ಕಸಗಿ, ಹುನಗುಂದ, ಇಲಕಲ್ಲ ಹೋಗಿ ತಪಾಸಣೆ ಮಾಡಿ ಈ ಕುರಿತು ಚಾಸಾ-13 ರವರಿಗೆ ವರದಿ ನೀಡಿರುತ್ತೇನೆ. ವರದಿಯನ್ನು  ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು  ನಿಪಿ-7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-7(ಎ)  ಎಂದು ಗುರುತಿಸಲಾಯಿತು.

ಪಾಟೀಸವಾಲುಃ 1 ರಿಂದ  4 ನೇ ಆರೋಪಿತರ  ಪರ ಶ್ರೀ. ಬಿ.ಎನ್.ಎಮ್. ವಕೀಲರಿಂದ ಃ

ಚಾಸಾ-13 ರವರು ಪ್ರಸ್ತುತ ಪ್ರಕರಣದಲ್ಲಿರುವ ಆರೋಪಿತರ ಪತ್ತೆ ಕುರಿತು ಆದೇಶ ಮಾಡಿದಾಗ ಬೆಳಿಗ್ಗೆ 10.00 ಗಂಟೆ ಆಗಿತ್ತು.  ಪ್ರಸ್ತುತ ಪ್ರಕರಣದಲ್ಲಿ ಯಾವ ಯಾವ ಆರೋಪಿತರ ಪತ್ತೆ ಕುರಿತು ಹೋಗಿರುತ್ತೀರಾ ಎಂದರೆ ಸಾಕ್ಷಿ ರಾಮಪ್ಪ ಯಮನಪ್ಪ ದಿವಾನಂದ ಹಾಗು ನಿರಂಜನ ಶಿವಪುತ್ರಪ್ಪ ತುಗನಸಿ ಇವರು ಪತ್ತೆ ಕುರಿತು ಹೋಗಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.  ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಮೇಲಾಧಿಕಾರಿಗಳು ಸುಳ್ಳು ಕೇಸು ಹಾಕಿ ಸುಳ್ಳು ವರದಿಯನ್ನು ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ.   ಮೇಲಾಧಿಕಾರಿಗಳಿಗೆ ಅನುಕೂಲ ಆಗಲಿ ಎಂದು  ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ.